ಪುನರಾರಂಭಿಸಿರುವುದಿಲ್ಲ. ಇದರಿಂದ ಕೂಡ ಕಾಮಗಾರಿಯು ಪೂರ್ಣಗೊಳ್ಳುವಲ್ಲಿ ವಿಳಂಬವಾಗಿರುವುದು. ಸದರಿ ಗುತ್ತಿಗೆದಾರರ ಗುತ್ತಿಗೆಯನ್ನು ಅವರ ಹೊಣೆ ಹಾಗೂ ಬಾಧ್ಯತೆಯ ಮೇಲೆ ವಜಾಗೊಳಿಸಲಾಗಿದೆ.

ಇ) ಲಕನಗಾಂವ ಆಣೆಕಟ್ಟು ನಿರ್ಮಾಣ ಕಾಮಗಾರಿಗಾಗಿ ಹೆಚ್ಚುವರಿ ಕೆಲಸ ಸೇರಿದಂತೆ ಒಟ್ಟು ರೂ. 448.18 ಲಕ್ಷ ನಿಗದಿಪಡಿಸಲಾಗಿದೆ. ಈ ಪೈಕಿ ರೂ. 423.54 ಲಕ್ಷ ವೆಚ್ಚವಾಗಿರುತ್ತದೆ. ಬಾಕಿ ಕಾಮಗಾರಿಯನ್ನು ನಿಯಮಾನುಸಾರ ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ನಾಗರಾಳ ಏತ ನೀರಾವರಿ ಯೋಜನೆ ಬಾಕಿ ಕಾಮಗಾರಿಗಾಗಿ ರೂ. 96.78 ಲಕ್ಷ ಮೊತ್ತದ ಅವಶ್ಯಕತೆ ಇದೆ. ಈ ಬಾಕಿ ಕಾಮಗಾರಿಯನ್ನು ಟೆಂಡರ ಆಧಾರದ ಮೇಲೆ ಕೈಗೆತ್ತಿಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಈ) ಲಕನಗಾಂವ ಕಾಮಗಾರಿಯ ಗುತ್ತಿಗೆದಾರರು ಬಾಕಿ ಕಾಮಗಾರಿಯನ್ನು ನಿರ್ವಹಿಸುವಲ್ಲಿ ವಿಳಂಬ ಮಾಡುತ್ತಿದ್ದು, ಗುತ್ತಿಗೆ ನಿಯಮಾನುಸಾರ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ನಾಗರಾಳ ಏತ ನೀರಾವರಿ ಯೋಜನೆಯ ಕಾಮಗಾರಿಯು ಭೂಸ್ವಾಧೀನ ಸಮಸ್ಯೆಯಿಂದಾಗಿ ಹಾಗೂ ನಂತರದ ದಿನಗಳಲ್ಲಿ ಗುತ್ತಿಗೆದಾರರಿಂದಾಗಿ ವಿಳಂಬವಾಗಿರುವುದು. ಸದರಿ ಕಾಮಗಾರಿಯ ಗುತ್ತಿಗೆದಾರರ ಗುತ್ತಿಗೆಯನ್ನು ಅವರ ಹೊಣೆ ಹಾಗೂ ಬಾಧ್ಯತೆಯ ಮೇಲೆ ವಜಾಗೊಳಿಸಲಾಗಿದೆ.

ಅರಣ್ಯ ಪ್ರದೇಶಾಭಿವೃದ್ಧಿ

379 (725) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಅರಣ್ಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್ ಜಿಲ್ಲೆಯಲ್ಲಿನ ಒಟ್ಟು ಅರಣ್ಯ ಪ್ರದೇಶ ಎಷ್ಟು; ಇದರಲ್ಲಿ ಕಾಯ್ದಿರಿಸಿದ ಅರಣ್ಯ ಹಾಗೂ ಸಾಮಾಜಿಕ ಅರಣ್ಯ ಪ್ರದೇಶ ಎಷ್ಟು (ಸಂಪೂರ್ಣ ವಿವರ ನೀಡುವುದು)

ಆ) 2009–10 ಹಾಗೂ 2010–11ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಸಸಿಗಳನ್ನು ನಡೆಸಲಾಗಿದೆ.

ಇ) ಜಿಲ್ಲೆಯಲ್ಲಿನ ಸಂಪೂರ್ಣ ಅರಣ್ಯ ಪ್ರದೇಶ ಸರ್ಕಾರದ ಅಧೀನದಲ್ಲಿದೆಯೇ ಹಾಗೂ ಇದರಲ್ಲಿ ಅಕ್ರಮವಾಗಿ ಒತ್ತುವರಿಯಾದ ಅರಣ್ಯ ಪ್ರದೇಶವೆಷ್ಟು;

ಈ) ಭಾಲ್ಕಿ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಪಿ. ಯೋಗೇಶ್ವರ (ಮಾನ್ಯ ಅರಣ್ಯ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 43607.10 ಹೆ. ವಿವರಗಳು ಈ ಕೆಳಗೆ ನಮೂದಿಸಿದೆ.

ಜಿಲ್ಲೆ	ಮೀಸಲು ಅರಣ್ಯ	ಸೆಕ್ಷನ್ 4 & 6	ರಕ್ಷಿತ ಅರಣ್ಯ	ವರ್ಗೀಕರಿಸದ ಅರಣ್ಯ	ಒಟ್ಟು (ಹೆ)
ಬೀದರ	5225.05	11546.761	1819.12	25016.17	43607.101

ಸಾಮಾಜಿಕ ಅರಣ್ಯ ವಿಭಾಗದಲ್ಲಿ ಅರಣ್ಯ ಪ್ರದೇಶ ಇರುವುದಿಲ್ಲ. ಗೋಮಾಳ, ರಸ್ತೆ ಬದಿ, ಕಾಲುವೆ ಬದಿ, ಕೆರೆದಂಡೆ ಪ್ರದೇಶ ಇತ್ಯಾದಿ ಪ್ರದೇಶಗಳಲ್ಲಿ ನೆಡುತೋಪು ಬೆಳೆಸಲಾಗುತ್ತಿದೆ.

ಆ) 2009–10 ಮತ್ತು 2010–11ನೇ ಸಾಲಿನಲ್ಲಿ ಬೀದರ ಜಿಲ್ಲೆಯಲ್ಲಿ ಈ ಕೆಳಗಿನಂತೆ ಸಸಿಗಳನ್ನು ನೆಡಲಾಗಿರುತ್ತದೆ.

ಜಿಲ್ಲೆ	ವಿಭಾಗ	2009–10		2010–11	
		ವಿಸ್ತೀರ್ಣ (ಹೆ.)	ನೆಟ್ಟ ಸಸಿಗಳು (ಲಕ್ಷಗಳಲ್ಲಿ)	ವಿಸ್ತೀರ್ಣ (ಹೆ.)	ನೆಟ್ಟ ಸಸಿಗಳು (ಲಕ್ಷಗಳಲ್ಲಿ)
ಬೀದರ್	ಬೀದರ್(ಪ್ರಾ)	829	5.384	659	4.723
	ಬೀದರ್(ಸಾಅ)	533	2.276	178	1.406
		1362	**7.660**	**837**	**6.129**

ಇ) ಬೀದರ ಜಿಲ್ಲೆಯಲ್ಲಿ ಒಟ್ಟು 43607.10 ಹೆ. ಅರಣ್ಯ ಪ್ರದೇಶ ಇದ್ದು ಇದರಲ್ಲಿ ಈ ಕೆಳಗಿನಂತೆ ಅನಧಿಕೃತವಾಗಿ ಅರಣ್ಯ ಭೂಮಿ ಒತ್ತುವರಿಯಾಗಿರುತ್ತದೆ. ವಿವರಗಳು ಈ ಕೆಳಗೆ ನಮೂದಿಸಿರುತ್ತದೆ. (ಹೆ.ಗಳಲ್ಲಿ)

ಜಿಲ್ಲೆ	ಅನಧಿಕೃತವಾಗಿ ಒತ್ತುವರಿಯಾದ ಅರಣ್ಯ ಪ್ರದೇಶ	ತೆರವುಗೊಳಿಸಿದ ಪ್ರದೇಶ	ಅರಣ್ಯ ಭೂಮಿ ತೆರವುಗೊಳಿಸುವ ಬಾಕಿ ಉಳಿದ ಪ್ರದೇಶ
ಬೀದರ	2591.038	1159.857	1431.181

ಈ) ಭಾಲ್ಕಿ ತಾಲ್ಲೂಕಿನಲ್ಲಿ ಒಟ್ಟು 2819.485 ಹೆ. ಅರಣ್ಯ ಪ್ರದೇಶವಿರುತ್ತದೆ. ಈ ಅರಣ್ಯ ಪ್ರದೇಶವನ್ನು ಸಂರಕ್ಷಿಸಲಾಗುತ್ತಿದೆ. ಹಾಗೂ ಭಾಲ್ಕಿ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸಲು ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗದಿಂದ 2009-10 ಮತ್ತು 2010-11ನೇ ಸಾಲಿನಲ್ಲಿ ಈ ಕೆಳಗಿನಂತೆ ನೆಡುತೋಪು ಬೆಳೆಸಲಾಗಿದೆ.

ವಿಭಾಗ	ತಾಲ್ಲೂಕು	ವರ್ಷ	ಸಾಮಾಜಿಕ ಅರಣ್ಯ	ಪ್ರಾದೇಶಿಕ ಅರಣ್ಯ ವಿಭಾಗ
ಬೀದರ	ಬಾಲ್ಕಿ	2009-10	137 ಹೆ.	75 ಹೆ.
		2010-11	34.25 ಹೆ.	-

ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಜಮೀನು

380 (941) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ ಎಷ್ಟು;

(ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಕೈಗಾರಿಕೆಗಳ ಸ್ಥಾಪನೆಗಾಗಿ ಹೂಡಲಿರುವ ಬಂಡವಾಳದ ಮೊತ್ತ ಮತ್ತು ಉದ್ಯೋಗ ಸೃಷ್ಟಿಯ ಕುರಿತಾದ ವಿವರಗಳನ್ನು ನೀಡುವುದು;

ಇ) ಸದರಿ ಕೈಗಾರಿಕಾ ಸಂಸ್ಥೆಗಳಿಗೆ ಸರಕಾರ ನೀಡಿರುವ ಜಮೀನುಗಳ ಪ್ರಮಾಣವೆಷ್ಟು; ಜಮೀನು ನೀಡಿಕೆಗೆ ವಿಧಿಸಿರುವ ಪ್ರಮುಖ ಷರತ್ತುಗಳೇನು? (ವಿವರ ನೀಡುವುದು)